ಕವಿತೆ

# ಎಲ್ಲೋ ಹೊರಟ ಮೋಡವೊಂದು...



ಎಲ್ಲೋ ಹೊರಟ ಮೋಡವೊಂದು
ನಿನ್ನಲ್ಲಿಗೆ ಹೊರಟಂತಿದೆ
ಬೀಸಿ ಬರುವ ಗಾಳಿ ಕೂಡ
ನಿನ್ನಿರವನು ಬಯಸಿದೆ

ಕಣ್ಣ ಕಾಂತಿಗೊಂದೇ ಒಂದು
ಹೋಲಿಕೆಯ ಕೊಡ ಬಯಸಿದೆ
ಚುಕ್ಕಿ ಕೂಡ ಇಲ್ಲವಾಯ್ತು
ಸಂಜೆ ಕಣ್ಣ ಬೆಳಕಿಗೆ

ನಿನ್ನ ನಗೆಗೆ ಏನು ಸಾಟಿ
ಎಂದು ಕೇಳಿದಂತಿದೆ
ಅರಳಿ ನಗುವ ಹೂವು ಕೂಡ
ಗಂಧ ಸೂಸಲು ಮರೆತಿದೆ

ಚಂದ್ರ ಬಿಂಬವೊಂದು ಇಳೆಗೆ
ಇಳಿದು ಬಂದ ಹಾಗಿದೆ
ಪ್ರಕೃತಿಯಂತೆ ನಿನ್ನ ಚೆಲುವು
ಹೃದಯದಲ್ಲಿ ಮೂಡಿದೆ

ಚಂದಿರನೂ ರಮಿಸುವಂತೆ
ನೀ ಬೆಳದಿಂಗಳನಂತಿರುವೆ
ತೊಟ್ಟ ರವಿಕೆ ಬಣ್ಣದಲ್ಲಿ
ಅಬ್ಬಲಿಗೆಯ ಹೂವಿದೆ

ಸಪೂರ ನಡು ನಾಭಿಯಲ್ಲಿ
ಉಸಿರು ಬಿಗಿ ಹಿಡಿದಿದೆ
ಮತ್ತು ಬರಿಸೋ ನಿನ್ನ ನೋಟ
ಮತ್ತೆ ಮತ್ತೆ ನೆನೆಸಿದೆ




ಫಾಲ್ಗುಣ ಗೌಡ ಅಚವೆ


ಕಲೆ: ವಾಗೀಶ ಹೆಗಡೆ